ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರಕ./
Ref. No. KSFC/H.O./IVPI; C- 2669

ದಿನಾಂಕ :
Date : December 04, 2023

CIRCULAR NO. 1039

**Sub: Interest Subsidy Scheme for the Entrepreneurs belonging to Backward Classes (Category 1 and Category 2A Castes).**

As announced in the budget speech by the Hon'ble Chief Minister for the Financial Year 2023-24 a Government Order dated 10/10/2023 was issued for implementing an interest subsidy scheme for the entrepreneurs belonging to Backward Classes (Category 1 and Category 2A). The Board in its meeting held on 08/11/2023 has approved for implementation of the scheme in the Corporation.

The salient features of the scheme are as below:

1. The entrepreneurs belonging to backward classes (Category-1 and Category 2A) are eligible to avail interest subsidy loans from KSFC for establishing units to be engaged in manufacturing/service sector activities-

   (a) Who takes up fresh units - first time entrepreneurs;
   (b) For existing units which are going for expansion/modernization/diversification and which have not availed in the past any loan and subsidy from Nationalised Banks/Apex Bank/DCC Banks/KSFC; and
   (c) The promoters are eligible to avail term loans only once.

2. The units should be fully owned by entrepreneurs belonging to Category-1 and Category-2A of Backward Classes. The ownership/shareholding of the units even in part by persons belonging to other than Category-1 and Category-2A are not eligible for interest subsidy under the scheme.

3. The persons who apply for loans under the scheme should submit caste certificate issued by the competent authority in Karnataka.

4. The minimum loan size is Rs.5.00 lakhs and the maximum loan limit is Rs.10.00 crores under the scheme. The maximum loan limit of Rs.10.00 crores includes one time working capital loan restricted to maximum of Rs.50.00 lakhs.

5. KSFC sanctions term loans under the scheme with normal applicable rate of interest (at present 11.50% p.a. net of 0.50% p.a. rebate for prompt repayment). An interest subsidy @ 6% p.a. will be reimbursed by Backward Classes Welfare Department, GoK to KSFC. The effective rate of interest to the borrowers under the scheme is 5.50% p.a. at present.

........... 2

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು - 560 052.
ದೂರವಾಣಿ ಸಂಖ್ಯೆ ಸಾಮಾನ್ಯ : 080-22263322 ಇ-ಮೇಲ್: info@ksfc.in ವೆಬ್: www.ksfc.in
HEAD OFFICE : K.S.F.C. Bhavan, # 1/1, Thimmaiah Road, Near Contonment Railway Station, Bengaluru - 560 052.

6. The maximum loan repayment period is 08 years for loans up to Rs. 5.00 crores and 10 years for loans between Rs.5.00 crores to Rs.10.00 crores. The borrowers are eligible for interest subsidy from the date of first disbursement of loan.

7. To avail the interest subsidy under the scheme the borrowers should be regular in repayment. Further, in case of defaults in payment of installments and interest, the government will not extend interest subsidy for that period. However, once the installments are regularized, the account will become eligible for interest subsidy.

8. The units/borrowers who have availed interest subsidy under any other scheme of Government of Karnataka/ Government of India are not eligible for interest subsidy under the scheme.

The scheme is extended to new and existing micro and small enterprises to be engaged or engaged in manufacturing and service sector activities. The definition of micro and small enterprises is as per the provisions of "Micro, Small and Medium Enterprises Development Act, 2006 (27 of 2006)".

This scheme is only interest subsidy scheme. The overall financial eligibility criteria and other lending parameters are governed by the lending policy of KSFC.

A copy of the Government Order dated 10/10/2023 is enclosed herewith for ready reference. All the concerned are hereby instructed to go through this G.O. and follow the guidelines given therein strictly while considering the loan proposals under the scheme.

The interest subsidy amounts is expected to be released to KSFC upfront. KSFC will adjust the eligible interest subsidy to the respective loan account on recovery of installments within the prescribed time limit. If there is any shortfall in the amount released by the government for interest subsidy, the borrowers will have to pay full interest and take reimbursement of interest subsidy when released by the government.

The working guidelines along with details of General Ledger Codes for accounting receipts and utilization of interest subsidy under the scheme will be issued by the Controller Department separately.

The contents of this circular shall be brought to the notice of all the concerned in your office/department.

MANAGING DIRECTOR

To
All AGMs/BMs of Branches
All AGMs/HoDs of IA Cells
All Section Heads in HO
All the General Managers
HoD(IA) & HoD(IT & MIS)
PA to MD, & Notice Board

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2023-24ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-163 ರಲ್ಲಿ ಘೋಷಿಸಿರುವಂತೆ ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಜಾತಿಗಳಿಗೆ ಸೇರಿದ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮೂಲಕ ರೂ.10.00 ಕೋಟಿಗಳವರೆಗಿನ ಸಾಲಕ್ಕೆ ಶೇ.6% ಬಡ್ಡಿ ದರದಲ್ಲಿ ಸಹಾಯಧನವನ್ನು ನೀಡುವ ಕುರಿತು.

**ಓದಲಾಗಿದೆ:-**
1. 2023-24ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-163.
2. ಆಯುಕ್ತರ ಪ್ರಸ್ತಾವನೆ ಸಂಖ್ಯೆ: BCWD-16012/20/2023-BCWD_TRAINING-BCWD, ದಿನಾಂಕ:03.08.2023

21.10.2023

ಕ.ರಾ.ಹ.ಸಂ
ಪ್ರ.ನಿ.ರ ಕಛೇರಿ
ಸಂಖ್ಯೆ : 610 ದಿ: 21/10/2023

**ಪ್ರಸ್ತಾವನೆ:**

HOD (IA) AGM (L)

ಮೇಲೆ ಓದಲಾದ (1)ರ 2023-24 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-163 ರಲ್ಲಿ "ರಾಜ್ಯದ ಸೇವಾ ವಲಯದಲ್ಲಿ ಇರುವ ವಿಪುಲ ಅವಕಾಶಗಳನ್ನು ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಜಾತಿಗಳಿಗೆ ಸೇರಿದ ಉದ್ಯಮಿಗಳು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ಪ್ರಥಮ ಬಾರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಪಡೆಯುವ ರೂ.10.00 ಕೋಟಿಗಳವರೆಗಿನ ಸಾಲಕ್ಕೆ ಶೇ.6ರಷ್ಟು ಬಡ್ಡಿ ಸಹಾಯಧನವನ್ನು ನೀಡಲಾಗುವುದು" ಎಂದು ಘೋಷಿಸಲಾಗಿರುತ್ತದೆ.

440 21/10

ಮೇಲೆ ಓದಲಾದ (2)ರ ಆಯುಕ್ತರ ಪ್ರಸ್ತಾವನೆಯಲ್ಲಿ 2023-24ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ ಸಂಖ್ಯೆ:163ರಲ್ಲಿ ಘೋಷಿಸಿರುವಂತೆ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ)ಗೆ ಸೇರಿದ ಜನಾಂಗದವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅತೀ ಹಿಂದುಳಿದಿರುತ್ತಾರೆ. ಸದರಿ ಜನಾಂಗದವರನ್ನು ಆರ್ಥಿಕವಾಗಿ ಸಧೃಡಗೊಳಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರುವುದು ಇಲಾಖೆಯ ಪ್ರಮುಖ ಉದ್ದೇಶವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಪ್ರವರ್ಗಗಳಲ್ಲಿನ ಅರ್ಹ ಉದ್ದಿಮೆದಾರರಿಗೆ ಉದ್ಯಮ ಕ್ಷೇತ್ರದಲ್ಲಿ ಉತ್ತೇಜಿಸುವ ಸಲುವಾಗಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ/ಸೇವಾ ಘಟಕಗಳನ್ನು ಸ್ಥಾಪಿಸಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ (KSFC) ಮೂಲಕ ಬಡ್ಡಿ ಸಹಾಯಧನ ನೀಡುವುದು ಅವಶ್ಯಕತೆ ಇರುತ್ತದೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ (KSFC) ಮೂಲಕ ರೂ.10.00 ಕೋಟಿಗಳವರೆಗೆ ಪಡೆಯುವ ಸಾಲಕ್ಕೆ ಶೇ.6% ರ ಬಡ್ಡಿ ದರದಲ್ಲಿ ಸಹಾಯಧನವನ್ನು ಮಂಜೂರು ಮಾಡಲು ಸರ್ಕಾರದ ಆದೇಶ ಹೊರಡಿಸುವಂತೆ ಕೋರಿ ಆಯುಕ್ತರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 396 ಬಿಎಂಎಸ್ 2023**
**ಬೆಂಗಳೂರು, ದಿನಾಂಕ: 10-10-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2023-24ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-163ರಲ್ಲಿ ಘೋಷಿಸಿರುವಂತೆ ರಾಜ್ಯದ ಸೇವಾ ವಲಯದಲ್ಲಿ ಇರುವ ವಿಪುಲ ಅವಕಾಶಗಳನ್ನು ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಜಾತಿಗಳಿಗೆ ಸೇರಿದ ಉದ್ಯಮಿಗಳು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ಪ್ರಥಮ ಬಾರಿಗೆ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ (KSFC) ಮೂಲಕ ಪಡೆ ಯು ರೂ.10.00ಕೋಟಿಗಳವರೆಗಿನ ಸಾಲಕ್ಕೆ ಶೇ.6%ರ ಬಡ್ಡಿ ದರದಲ್ಲಿ ಸಹಾಯಧನವನ್ನು ನೀಡಲು ಹಾಗೂ ಈ ಯೋಜನೆಗೆ ತಗಲುವ ವೆಚ್ಚವನ್ನು ತರಬೇತಿ, ಅರಿವು ಮತ್ತು ಪ್ರೋತ್ಸಾಹ-ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ ಲೆಕ್ಕಶೀರ್ಷಿಕೆ:2225-03-277-2-37 ಆಬ್ಜೆಕ್ಟೀವ್ ಕೋಡ್-059 ರಡಿಯಲ್ಲಿ ಭರಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

**ಯೋಜನೆಯ ನಿಯಮಗಳು ಮತ್ತು ಷರತ್ತುಗಳು:**

1. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ನಿಯಮಗಳಿಗೆ ಒಳಪಟ್ಟ, ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಜಾತಿಗಳಿಗೆ ಸೇರಿದ ಉದ್ದಿಮೆದಾರರು ಉತ್ಪಾದನೆ/ ಉದ್ಯಮ/ ಸೇವಾ ಚಟುವಟಿಕೆಗಳ ಘಟಕಗಳನ್ನು ಪ್ರಾರಂಭಿಸಲು ಈ ಯೋಜನೆಯಲ್ಲಿ ಸಹಾಯಧನವನ್ನು ಪಡೆಯಲು ಅರ್ಹರಿರುತ್ತಾರೆ.

a. ಹೊಸ ಘಟಕವನ್ನು ಸ್ಥಾಪಿಸುವವರು ಪ್ರಾರಂಭಿಕ ಉದ್ದಿಮೆದಾರರಾಗಿರಬೇಕು.

b. ಅಸ್ತಿತ್ವದಲ್ಲಿರುವ ಘಟಕಗಳ ವಿಸ್ತರಣೆ, ಆಧುನೀಕರಣ ಮತ್ತು ವೈವಿಧ್ಯೀಕರಣವನ್ನು ಮಾಡುವ ಉದ್ಯಮದಾರರು ಈ ಹಿಂದೆ ರಾಷ್ಟ್ರೀಕೃತ ಬ್ಯಾಂಕ್‌ಗಳು/ಅಪೆಕ್ಸ್ ಬ್ಯಾಂಕ್/ ಡಿಸಿಸಿ ಬ್ಯಾಂಕ್/ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗಳ ವತಿಯಿಂದ ಸಾಲ ಹಾಗೂ ಸಬ್ಸಿಡಿಯನ್ನು ಪಡೆದಿರಬಾರದು.

c. ಉದ್ದಿಮೆದಾರರು ಒಮ್ಮೆ ಮಾತ್ರ ಈ ಪ್ರಯೋಜನವನ್ನು ಪಡೆಯಲು ಅರ್ಹರಾಗಿರುತ್ತಾರೆ.

2. ಘಟಕವು ಸಂಪೂರ್ಣವಾಗಿ ಪ್ರವರ್ಗ-1 ಮತ್ತು ಪ್ರವರ್ಗ-2(ಎ)ಗೆ ಸಂಬಂಧಿಸಿದ ಉದ್ದಿಮೆದಾರರು ಮಾಲೀಕತ್ವವನ್ನು ಹೊಂದಿರಬೇಕು. ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಜಾತಿಯವರನ್ನು ಹೊರತುಪಡಿಸಿ ಭಾಗಶಃ ಘಟಕಗಳ ಮಾಲೀಕತ್ವ/ಷೇರು ಹಿಡುವಳಿ ಬಡ್ಡಿ ಸಹಾಯಧನಕ್ಕೆ ಅರ್ಹವಾಗಿರುವುದಿಲ್ಲ.

3. ಅರ್ಜಿದಾರರು ಪ್ರವರ್ಗ-1 ಮತ್ತು ಪ್ರವರ್ಗ-2(ಎ)ಗೆ ಸೇರಿರಬೇಕು ಮತ್ತು ಕರ್ನಾಟಕದಲ್ಲಿ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಜಾತಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸಬೇಕು. ಮೂಲ ಜಾತಿ ಪ್ರಮಾಣ ಪತ್ರದ ವೈಯಕ್ತಿಕ ಪರಿಶೀಲನೆ ಮಾಡುವುದು. ಸಂದೇಹವಿದ್ದಲ್ಲಿ, ಸಾಲವನ್ನು ಬಿಡುಗಡೆ ಮಾಡುವ ಮೊದಲು ಜಾತಿ ಪ್ರಮಾಣ ಪತ್ರದ ಅಸಲಿತನವನ್ನು ಸಕ್ಷಮ ಪ್ರಾಧಿಕಾರದಿಂದ ಪರಿಶೀಲಿಸತಕ್ಕದ್ದು. ಸಾಲ ಪಡೆದವರ ವಿರುದ್ಧ ಜಾತಿ ಪ್ರಮಾಣ ಪತ್ರದ ಬಗ್ಗೆ ಯಾವುದೇ ದೂರು ಇದ್ದಲ್ಲಿ, ಮುಂದಿನ ಕ್ರಮಕ್ಕಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಕಳುಹಿಸಬೇಕು. (ಸುಳ್ಳು ಜಾತಿ ಪ್ರಮಾಣ ಪತ್ರ ಪ್ರಕರಣಗಳನ್ನು ತಪ್ಪಿಸಲು ಇವು ಅಗತ್ಯ). ಜಾತಿ ಪ್ರಮಾಣ ಪತ್ರವು ಸುಳ್ಳು ಎಂದು ಕಂಡುಬಂದಲ್ಲಿ, ಅರ್ಜಿದಾರರು ಕಾನೂನು ಕ್ರಮಕ್ಕೆ ಅರ್ಹರಾಗಲಿದ್ದಾರೆ ಮತ್ತು ಪಡೆದ ಸಂಪೂರ್ಣ ಬಡ್ಡಿ ಸಬ್ಸಿಡಿಯನ್ನು ಮರು ಪಾವತಿಸಲು ಸಹ ಜವಾಬ್ದಾರರಾಗಿರುತ್ತಾರೆ.

4. ಬಡ್ಡಿ ಸಬ್ಸಿಡಿ ಸಾಲದ ಮೊತ್ತ ಗರಿಷ್ಠ ಸಾಲದ ಮಿತಿ ರೂ.10.00 ಕೋಟಿಗಳವರೆಗೆ ಮಾತ್ರ ಇರುತ್ತದೆ.

5. ಗರಿಷ್ಠ ಸಾಲದ ಮಿತಿ ರೂ.10.00 ಕೋಟಿಗಳು ಟರ್ಮ್ ಲೋನ್ ಮತ್ತು ಯೋಜನಾ ಪ್ರಸ್ತಾವನೆಯನ್ನು ಆಧರಿಸಿ ಒಂದು ಬಾರಿ ದುಡಿಯುವ ಬಂಡವಾಳವನ್ನು ಒಳಗೊಂಡಿರುತ್ತದೆ. ಆದರೆ, ಕಾರ್ಯನಿರತ ಬಂಡವಾಳವು ಗರಿಷ್ಠ ರೂ.50.00 ಲಕ್ಷಗಳಿಗೆ ಸೀಮಿತವಾಗಿದೆ. ದುಡಿಯುವ ಬಂಡವಾಳ ಮಂಜೂರಾತಿ ಪುನರಾವರ್ತನೆಯನ್ನು ಅನುಮತಿಸಲಾಗುವುದಿಲ್ಲ.

6. ಕನಿಷ್ಟ ಸಾಲದ ಮೊತ್ತ ಈ ಯೋಜನೆಯಡಿ ರೂ.5.00 ಲಕ್ಷಗಳಾಗಿದೆ. (ಇತರ ಯೋಜನೆಗಳು ಇರುವುದರಿಂದ ಇದನ್ನು ಸೂಚಿಸಲಾಗಿದೆ ಸಬ್ಸಿಡಿಯನ್ನು ಘಟಕ ವೆಚ್ಚದ ಮೇಲೆ ಮತ್ತು ಸುಲಭವಾದ ಮೇಲ್ವಿಚಾರಣೆಯ ಹಂತದಿಂದ ನೀಡಲಾಗುತ್ತದೆ).

7. ಫಲಾನುಭವಿ/ಅರ್ಜಿದಾರರು ಸಾಲದ ಮೊತ್ತದ ಮೇಲೆ ಒಟ್ಟು ಚಾರ್ಜ್ ಮಾಡಬಹುದಾದ ಬಡ್ಡಿಯಲ್ಲಿ ಶೇಕಡಾ 6%ರಷ್ಟು ಬಡ್ಡಿ ಮೊತ್ತವನ್ನು ಮಾತ್ರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ (KSFC) ಭರಿಸಲಾಗುವುದು. ಉಳಿದ ಬಡ್ಡಿ ಮೊತ್ತವನ್ನು ಫಲಾನುಭವಿ/ ಅರ್ಜಿದಾರರು ಭರಿಸಬೇಕು.
8. ಮರುಪಾವತಿ ಅವಧಿಯು ರೂ.5.00 ಕೋಟಿಗಳವರೆಗೆ ಇದ್ದಲ್ಲಿ 8 ವರ್ಷಗಳು, ರೂ.5.00 ಕೋಟಿಯಿಂದ ರೂ.10.00 ಕೋಟಿಗಳವರೆಗಿನ ಮೊತ್ತಕ್ಕೆ ಗರಿಷ್ಟ 10 ವರ್ಷಗಳ ಮರುಪಾವತಿಯ ಅವಧಿಯನ್ನು ನಿಗಧಿಪಡಿಸಲಾಗಿರುತ್ತದೆ.
9. ಯೋಜನಾ ವೆಚ್ಚ/ಸಾಲದ ಯಾವುದೇ ಮೊತ್ತವನ್ನು ನೀಡಲು ನಿಗದಿಪಡಿಸಿದ ಮೊತ್ತಗಿಂತ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಸಂಪೂರ್ಣ ಸ್ವಾತಂತ್ರ್ಯ ಇರುತ್ತದೆ.
10. ಉದ್ದಿಮೆದಾರರು ಸಾಲದ ಮೊದಲ ಕಂತು ಬಿಡುಗಡೆಯಾದ ದಿನಾಂಕದಿಂದಲೇ ಬಡ್ಡಿ ಸಬ್ಸಿಡಿಗೆ ಅರ್ಹವಾಗಲಿದ್ದಾರೆ.
11. ಉದ್ದಿಮೆದಾರರಿಗೆ ಮಂಜೂರು ಮಾಡಿರುವ ಸಾಲದ ಬಾಬ್ತು ಮತ್ತು ಬಡ್ಡಿ ಬಾಬ್ತನ್ನು ವಸೂಲಿ ಮಾಡುವುದು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. ಉದ್ದಿಮೆದಾರರು ಸಾಲದ ಕಂತಿನ ಬಾಬ್ತು ಹಾಗೂ ಅವರು ಪಾವತಿಸಬೇಕಾದ ಬಡ್ಡಿಯನ್ನು ಪಾವತಿಸಿದಲ್ಲಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಶೇಕಡಾ 6%ರಷ್ಟು ಬಡ್ಡಿ ಮೊತ್ತವನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಭರಿಸಲಾಗುವುದು.
12. ಉದ್ದಿಮೆದಾರರು ಕಂತು ಮತ್ತು ಬಡ್ಡಿಯನ್ನು ಪಾವತಿಸುವಲ್ಲಿ ವಿಫಲವಾದ ಸಂದರ್ಭದಲ್ಲಿ ಸರ್ಕಾರವು ಆ ಅವಧಿಗೆ ಬಡ್ಡಿ ಸಬ್ಸಿಡಿಯನ್ನು ಪಾವತಿಸುವುದಿಲ್ಲ. ಆದರೆ ಒಮ್ಮೆ ಕಂತುಗಳನ್ನು ಕ್ರಮಬದ್ಧಗೊಳಿಸಿದರೆ ಮತ್ತೊಮ್ಮೆ ಬಡ್ಡಿ ಸಬ್ಸಿಡಿಗೆ ಅರ್ಹವಾಗಿರುತ್ತಾರೆ.
13. ಭಾರತ ಸರ್ಕಾರ/ಕರ್ನಾಟಕ ರಾಜ್ಯ ಸರ್ಕಾರದ ಯಾವುದೇ ಇತರ ಯೋಜನೆಯ ಅಡಿಯಲ್ಲಿ ಬಡ್ಡಿ ಸಬ್ಸಿಡಿಯನ್ನು ಪಡೆದ ಘಟಕಗಳು/ಉದ್ದಿಮೆದಾರರು ಈ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
14. ಯೋಜನೆಯ ಸುಗಮ ಕಾರ್ಯನಿರ್ವಹಣೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತರನ್ನೊಳಗೊಂಡ ಸಮಿತಿಯಲ್ಲಿ ಮೇಲ್ವಿಚಾರಣೆ ಮಾಡಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 656 ವೆಚ್ಚ-3/2023 ದಿನಾಂಕ:-21.09.2023ರಲ್ಲಿ ಹಾಗೂ ಯೋಜನೆ ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್ 78 ಐಎಂಎಂ 2023, ದಿನಾಂಕ:07.10.2023 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

V. Akkamahadevi

**(ವಿ. ಅಕ್ಕಮಹಾದೇವಿ)**
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

<u>ಇವರಿಗೆ:-</u>

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ,

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ಆಯುಕ್ತರು, ಸೂಕ್ಷ್ಮ, ಸಣ್ಣ ಮಧ್ಯಮ ಕೈಗಾರಿಕಾ ನಿರ್ದೇಶನಾಲಯ, ಖನಿಜ ಭವನ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (KSFC), ತಿಮ್ಮಯ್ಯ ರೋಡ್, ಬೆಂಗಳೂರು.560052
7. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ , ವಿಕಾಸ ಸೌಧ ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು, ವಿಕಾಸಸೌಧ ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

------